## ಕಳೆದ ಸಂಚಿಕೆಯಲ್ಲಿ



ಅಮ್ಮೂಳನ್ನು ಭೇಟಿ ಮಾಡಲು ಬಂದು ಸ್ಟುಡಿಯೊ ಹೊರಗೆ ಕಾಯುತ್ತಿದ್ದ ಜಯಂತನನ್ನು ಭೇಟಿಯಾದ ಜಾಹ್ನವಿ ತನ್ನ ಸಮಸ್ಯೆಗಳನ್ನೆಲ್ಲ ಹೇಳಿಕೊಂಡಳು. ಕಿರುತೆರೆ ಹಾಗೂ ಟೀವಿ ಮಾಧ್ಯಮದಲ್ಲಿ ನಡೆಯುವ ಲೈಂಗಿಕ ಶೋಷಣೆಯ ಬಗ್ಗೆಯೂ ಹೇಳಿದಳು. ಜಾಹ್ನವಿಯ ಮಾತುಗಳನ್ನು ಕೇಳಿದ ನಂತರ ಜಯಂತನೊಳಗಿನ ಗೊಂದಲಗಳು ಮತ್ತಷ್ಟು ಹೆಚ್ಚಾದವು. ಹೆಣ್ಣುಮಕ್ಕಳನ್ನು ಕೆಟ್ಟದಾಗಿ ನಡೆಸಿಕೊಳ್ಳುವ ಉದ್ಯಮದಲ್ಲಿ ಅಮ್ಮು ಕೆಲಸ ಮಾಡುವುದು ಅವನಿಗೆ ಕಿರಿಕಿರಿಯೆನ್ನಿಸತೊಡಗಿತು. ಮದುವೆಯ ನಂತರ ಅಮ್ಮು ನಟಿಸುವುದನ್ನು ಬಿಡಬೇಕೆನ್ನುವುದು ಅವರ ಪ್ರೀತಿಯ ಒತ್ತಾಯವಾಯಿತು. ಆದರೆ, ಜಯಂತನ ಅಭಿಪ್ರಾಯವನ್ನು ಅಮ್ಮು ಒಪ್ಪಲಿಲ್ಲ. ಅಭಿನಯ ಕ್ಷೇತ್ರದಲ್ಲಿ ಆತ್ಮಗೌರವದಿಂದ ಮುಂದುವರೆಯುವುದಾಗಿ ಹಟ ಹಿಡಿದಳು. ಈ ಭಿನ್ನಾಭಿಪ್ರಾಯ ಇಬ್ಬರ ನಡುವೆ ವಿರಸಕ್ಕೆ ಕಾರಣವಾಯಿತು. ಹೀಗೆ ಒಂದೊಂದೇ ಎಳೆಗಳನ್ನು ಮಾಯಣ್ಣ ಬಿಡಿಸುತ್ತಾ ಹೋದಂತೆ, ಕೊಲೆಗೆ ಬಳಸಲಾದ ಆಯುಧವೂ ಪತ್ತೆಯಾಯಿತು. ಆ ಆಯುಧ ಜಯಂತನ ಕಾರಿನಲ್ಲೇ ದೊರೆಯಿತು. ಆಯುಧ ದೊರೆತ ನಂತರವೂ ಮಾಯಣ್ಣ ಯಾವುದೇ ನಿರ್ಧಾರಕ್ಕೆ ಬರಲಿಲ್ಲ. ಫೋಟೊಗಳು ನೀಡಿದ ಸುಳಿವಿನ ಮೇರೆಗೆ ಅಮ್ಮು ಮನೆಯಲ್ಲಿ ಉಗುರು ಕತ್ತರಿಸುವ ನೇಲ್ ಕಟರ್ ನಾಪತ್ತೆಯಾಗಿತ್ತು. ಅದನ್ನು ಹುಡುಕುವುದಕ್ಕಾಗಿ ರಾತ್ರಿಯ ವೇಳೆ ಮಾಯಣ್ಣನೇ ಅಮ್ಮುವಿನ ಮನೆಗೆ ಹೋದ.

'ಬಿಟ್ಟರಾ... ಇನ್ಯಾವ್ದೋ ಕೇಸಲ್ಲಿ ಫಿಟ್ ಮಾಡ್ಸಿ ಅವುನುನ್ನ ಆರ್ ತಿಂಗಳು ಸಸ್ಪೆಂಡ್ ಮಾಡುಸ್ಬುಟ್ರು. ಆಮೇಲೇನೆ ಅವ್ನೊಂದು ಲೈನುಗ್ ಬಂದಿದ್ದು'.

'ಮೊದಲಿಂದ ಹೀಗೇನಾ ಈ ಕಾಟಯ್ಯ?'

'ಮೊದ್ಲು ನಮ್ಮಪ್ಪ ನಂಬಿ ಈವಯ್ಯನ್ನಾ ಬಲಗೈ, ಎಡಗೈ ಎರಡೂ ಮಾಡ್ಕೊಂಬಿಟ್ಟಿದ್ರೂ. ಮಾರ್ಕೆಟ್‌ಗೆ ಡೈಲಿ ಕಲೆಕ್ಷನ್ನೂ, ತರ್ಕಾರಿ ಕಲೆಕ್ಷನ್ನೂ ಅಂತ ಕಳಸವ್ರಲ್ಲಾ... ಅವಗಾ ಒಳ್ಳೊಳ್ಳೆ ತರ್ಕಾರಿ– ಬಟಾಣಿ, ಕೋಸು, ಕ್ಯಾರೆಟ್ಟೂ ಇಂಥವೆಲ್ಲಾ ಅವನಿಕ್ಕೊಂಡು, ನಮ್ಮನೆಗೆ ಸೀಮೆಬದನೆಕಾಯಿ, ಚೌಳಿಕಾಯಿ, ಕುಂಬಳಕಾಯಿ ಇಂಥವೆಲ್ಲ ತರೋನು... ಆಮೇಲೆ ನಮ್ಮಪ್ಪ ಅವುನ್ನಾ, ಎಲ್ ಟೈಟ್ ಮಾಡ್ಬೇಕೊ ಅಲ್ಲಿ ಟೈಟ್ ಮಾಡುದ್ ಮೇಲೆನೇ ಒಂದು ದಾರಿಗ್ ಬಂದಿದ್ದು... ಅದಿರಲಿ ಅದೇ ನಮ್ಮನೆ ಕಟ್ಟಕೆ ಇಂಜಿನಿಯರ್ ಅತ್ರ ಪ್ಲಾನ್ ಆಕ್ಸೀ ಅಂದ್ನಲ್ಲಾ ಏನಾಯ್ತು?'

'ಅದು ಸದ್ಯಕ್ಕೆ ಆಗಂಗಿಲ್ಲ ಬಿಡು'.

'ಅದೆಲ್ಲಾ ಆಗಲ್ಲ, ಈ ವಿಜಯದಶಮಿಗೆ ಗುದ್ದಲಿ ಪೂಜೆ ಆಗ್ಬೇಕು'.

'ಆ ಇಂಜಿನಿಯರ್ ಈಗ ಸಿಕ್ಕಾಪಟ್ಟೆ ಬಿಜಿ ಅಂತೆ'.

'ನಂಗೊತ್ತಿಲ್ಲ, ಅವ್ನ್ ಎದೆ ಮೇಲೆ ಕುಂತು ಬೇಗ ಪ್ಲಾನ್ ಮಾಡ್ಸಿ'.

'ಅದು ಆಗಲ್ಲ ಬಿಡು. ಆ ಇಂಜಿನಿಯರ್ ಮೊದಲೇ ಹಾರ್ಟ್ ಪೇಷೆಂಟು. ನಾನು ಹೋಗಿ ಅವನೆದೆ ಮೇಲೆ ಕುಂತುಕೊಂಡರೆ ಶಿವನ ಪಾದ ಸೇರ್ಕೊಂಬುಡ್ತಾನೆ'.

'ಓಗ್ಲಿ ನಿಮ್ ಕ್ವಾಟ್ರರ್ಸ್ ಪಕ್ಕ ಒಬ್ರು ಇಂಜಿನಿಯರ್ ಅವ್ರಂತಲ್ಲ'.

'ಅದೂ ಆಗಲ್ಲ ಬಿಡು'.

'ಯಾಕೆ?'

'ಅದು ಲೇಡಿ ಇಂಜಿನಿಯರ್'.

'ಆಯ್ತು ಇವಾಗ ಫೋನ್ ಇಡಿ... ಆಮೇಲೆ ನಾನೇ ಫೋನ್ ಮಾಡ್ತೀನಿ'.

***

ರಾತ್ರಿ ಕತ್ತಲು ಕವುಚಿಕೊಳ್ಳುತ್ತಿದ್ದಂತೆ ಯಾರಿಗೂ ಯಾವ ಸುಳಿವೂ ಕೊಡದೆ ಇತ್ತ ಮಾಯಣ್ಣ ತನ್ನ ಪ್ರಯಾಣಕ್ಕೆ ಸಿದ್ಧತೆ ನಡೆಸಿದ್ದ. ಆ ರಾತ್ರಿ ಊರು ಬಿಟ್ಟವನು ಎರಡು ದಿನದ ಅಜ್ಞಾತವಾಸದ ನಂತರವಷ್ಟೇ ಅವನು ಠಾಣೆಗೆ ಹಾಜರಾದಾಗ ಎಲ್ಲಾ ಸಿಬ್ಬಂದಿಗಳಿಗೆ ಸಖೇದಾಶ್ಚರ್ಯವಾಗಿತ್ತು. ಏಕೆ ಭರದಿಂದ ಸಾಗಿದ್ದ ತನಿಖೆಯನ್ನು ಮಾಯಣ್ಣ ನಿಲುಗಡೆಗೆ ತಂದಿದ್ದ ಎಂದು. ಈ ಮಧ್ಯೆ ಅವನು ಫೋನ್ ಸಂಪರ್ಕದಲ್ಲಿದ್ದದ್ದು ಭುಜಂಗನೊಡನೆ ಮಾತ್ರ, ಅದೂ ತುರ್ತುಸ್ಥಿತಿಗಳಲ್ಲಿ ಮಾತ್ರ ಕರೆಯಬೇಕೆಂಬ ಸೂಚನೆಯೊಡನೆ. ಇಂಥ ಪರಿಸ್ಥಿತಿಯಲ್ಲಿ ಮಾಯಣ್ಣನ ಗೈರುಹಾಜರಿ ಮೇಲಧಿಕಾರಿಗಳಿಗೆ ಬೇಜವಾಬ್ದಾರಿ, ಅಶಿಸ್ತು ಅನಿಸಿದ್ದರೆ, ಠಾಣೆಯ ಸಿಬ್ಬಂದಿಗಳಿಗೆ ಅರ್ಥವಾಗದ ನಡೆಯಾಗಿತ್ತು.

ಹೀಗೆ ಎರಡು ದಿನಗಳ ನಂತರ ಠಾಣೆಗೆ ಬಂದ ಮಾಯಣ್ಣ ಠಾಣೆಯ ಎಲ್ಲಾ ಸಿಬ್ಬಂದಿಗಳನ್ನು ತನ್ನ ಕೋಣೆಗೆ ಕರೆಸಿದ್ದ. ಎಲ್ಲರೂ ಠೀಕಾಗಿ ಮಾಯಣ್ಣನ ಮೇಜಿನ ಮುಂದೆ ಬಂದು ಸಾಲಾಗಿ ನಿಂತಿದ್ದರು.

'ಅಮ್ಮುವಿನ ಕೊಲೆಯಾಗಿ ಇಂದಿಗೆ ಸರಿಯಾಗಿ ಒಂಬತ್ತು ದಿನವಾಗಿದೆ. ಅಂತೆಯೇ ಅದರ ತನಿಖೆಗೂ ಒಂಬತ್ತು ದಿನವಾಗಿದೆ. ಈ ಕೊಲೆ ಪ್ರಕರಣದ ತನಿಖಾಧಿಕಾರಿಯಾದ ನಾನು ಈ ತನಿಖೆಯು ಯಶಸ್ವಿಯಾಗಿ ಮುಕ್ತಾಯವಾಗಿದೆ ಅಂತ ಘೋಷಣೆ ಮಾಡ್ತಾಯಿದ್ದೀನಿ. ಈ ತನಿಖೆಯಲ್ಲಿ ಅಹರ್ನಿಶಿಯಾಗಿ ತೊಡಗಿಸಿಕೊಂಡು ಯಶ ಸಾಧಿಸಿರುವ ನಿಮ್ಮೆಲ್ಲರಿಗೂ ನನ್ನ ಅಭಿನಂದನೆಗಳು'.

ಎಲ್ಲಾ ಪೇದೆಗಳಿಗೂ, ಮಾಯಣ್ಣನ ಈ ಹಠಾತ್ ಮುಕ್ತಾಯ ಘೋಷಣೆ, ಜೊತೆಗೆ ಇದ್ದಕ್ಕಿದ್ದಂತೆ ಈ ತನಿಖೆ ಮುಗಿದುದಾದರೂ ಹೇಗೆ, ಈ ಎರಡು ದಿನಗಳಲ್ಲಿ ಮಾಯಣ್ಣ ಹೋದುದ್ದಾದರೂ ಎಲ್ಲಿಗೆ, ನಡೆದದ್ದಾದರೂ ಏನು, ಈ ಕೊಲೆಯ ಅಪರಾಧಿಯಾದರು ಯಾರು, ಒಂದೂ ತಿಳಿಯದೆ ಆಶ್ಚರ್ಯತುಂದಿಲರಾಗಿದ್ದರು. ಹೆಚ್ಚು ಕಡಿಮೆ ಒಕ್ಕೊರಲಿನಿಂದ ಬಂದ ಪ್ರಶ್ನೆ–

'ಯಾರು ಸಾರ್?'

'ನಾಳೆ ಬೆಳಿಗ್ಗೆ ಹತ್ತು ಗಂಟೆಗೆ ಎಸ್.ಪಿ. ಸಾಹೇಬರಿಗೆ ಠಾಣೆಗೆ ಆಹ್ವಾನಿಸಿದ್ದೇನೆ. ಅವರ ಮತ್ತು ನಿಮ್ಮೆಲ್ಲರ ಸಮ್ಮುಖದಲ್ಲಿ ಈ ತನಿಖೆಯ ಸಮಾರೋಪ ಕಾರ್ಯಕ್ರಮ ನಡೆಯುತ್ತೆ. ಅಲ್ಲಿತನಕ ನಿಮ್ಮ ಕುತೂಹಲ ಕಾಯ್ದಿರಿಸಿಕೊಳ್ಳಿ' ಎಂದಷ್ಟೇ ಹೇಳಿ–

'ವಿನಯ್, ನಾಳೆ ಬೆಳಿಗ್ಗೆ ಹತ್ತು ಗಂಟೆಗೆ ಕಡ್ಡಾಯವಾಗಿ ರವಿ, ಜಾಹ್ನವಿ, ಎಸ್ಟೇಟ್ ಮ್ಯಾನೇಜರ್ ಚಂದ್ರನ್, ಜಯಂತ್ ಮತ್ತು ಡೈರೆಕ್ಟರ್ ದಿನೇಶ್ ಇಲ್ಲಿ ಠಾಣೆಯಲ್ಲಿರಬೇಕು. ಈಗ ನಾನು ತಾರಸಿ ಮೇಲಿರ್ತೀನಿ, ಒಂದು ಕಾಫಿ ಕಳಿಸಿ' ಎನ್ನುತ್ತಾ ಮೆಟ್ಟಿಲ ಕಡೆ ಹೊರಟ.

### 15

ಅಮ್ಮು ಕೊಲೆಯಾಗಿ ಒಂಬತ್ತು ಮುಗಿದು ಹತ್ತನೇ ದಿನದ ಮುಂಜಾನೆ. ಜಿಲ್ಲೆಯ ವರಿಷ್ಠ ಪೊಲೀಸ್ ಅಧಿಕಾರಿಗಳಾದ ಎಸ್.ಪಿ. ಸಾಹೇಬರಿಗೆ ಬೆಳಿಗ್ಗೆ ಹತ್ತು ಗಂಟೆಗೆ ಠಾಣೆಗೆ ಬರಲು ಕೇಳಿಕೊಂಡಿದ್ದ ಮಾಯಣ್ಣ. ಅವರ ಮತ್ತು ಠಾಣೆಯ ಸಮಸ್ತ ಸಿಬ್ಬಂದಿಗಳ ಸಮಕ್ಷಮದಲ್ಲಿ ಈ ತನಿಖಾ ಪ್ರಕ್ರಿಯೆಗೆ ಇಂದು ಮಂಗಳ ಹಾಡಬೇಕಾಗಿತ್ತು. ಅಂದರೆ ಎಲ್ಲಾ ಶಂಕಿತ ಆರೋಪಿಗಳನ್ನು ಠಾಣೆಗೆ ಕರೆಸಿ ಅವರಲ್ಲಿ ನಿಜವಾದ ಹಂತಕನನ್ನು ಸಾಕ್ಷಿ ಪುರಾವೆಗಳ ಸಮೇತ ಗುರುತಿಸಿ, ವಿಧ್ಯುಕ್ತವಾಗಿ ಬಂಧನಕ್ಕೊಳಪಡಿಸುವ ಕಾರ್ಯಕ್ರಮ.

ಅಲ್ಲದೆ ಶಂಕಿತರ ಪಟ್ಟಿಯಲ್ಲಿನ ನಿರಪರಾಧಿಗಳನ್ನು ಸಾಕ್ಷಿ ಪುರಾವೆಗಳ ಸಮೇತ ಮುಕ್ತಗೊಳಿಸುವುದೂ ಕೂಡ ಅಷ್ಟೇ ಮುಖ್ಯವಾಗಿತ್ತು. ಈ ಇಡೀ ತನಿಖಾ ಪ್ರಕ್ರಿಯೆ ಮತ್ತು ಅದರ ಫಲಶ್ರುತಿ, ತಾರ್ಕಿಕ ನೆಲೆಗಟ್ಟು ಮತ್ತು ಕಾನೂನಿನ ಚೌಕಟ್ಟಿಗೆ ಅನುಗುಣವಾಗಿದೆಯೇ ಎಂದು ಖಾತ್ರಿಪಡಿಸಿಕೊಳ್ಳುವ ಉದ್ದೇಶದಿಂದ ಎಸ್.ಪಿ. ಸಾಹೇಬರನ್ನ ಕರೆಸಿದ್ದ ಮಾಯಣ್ಣ. ಅಲ್ಲದೆ ಈ ತನಿಖೆಯಲ್ಲಿ ಬಿಡಿಬಿಡಿಯಾಗಿ ಭಾಗಿಯಾಗಿದ್ದ ಕೆಳಗಿನ ಸಿಬ್ಬಂದಿಗಳ ಮುಂದೆ, ಸಮಗ್ರ ಚಿತ್ರವನ್ನು ಮುಂದಿಟ್ಟು ಅವರನ್ನು ತನಿಖಾ ಕೌಶಲ್ಯದಲ್ಲಿ ಸಜ್ಜುಗೊಳಿಸುವ ಉದ್ದೇಶವೂ ಇತ್ತು.